

بسم اللهِ الرّحمٰن الرّحيم

# ಲಾ ಇಲಾಹ ಇಲ್ಲಲ್ಲಾಹ್ – ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–04–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

**ಲಾ ಇಲಾಹ ಇಲ್ಲಲ್ಲಾಹ್** ಎಂಬ ವಾಕ್ಯ ಏಕದೇವ ವಿಶ್ವಾಸದ ಬುನಾದಿಯಾಗಿದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವವನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗಿದೆ. ಆದ್ದರಿಂದ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಅವನ ಕಡೆಗೆ ಬಾಗುತ್ತಾ, ತನ್ನ ಗಮನವನ್ನು ನಿಷ್ಠಾವಂತನಾಗಿ ಅಲ್ಲಾಹನ ಕಡೆಗೆ ಮಾಡುತ್ತಾ ಮನುಷ್ಯನು **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವಾಗ ಆತನು ಅಲ್ಲಾಹನ ಅನುಗ್ರಹಗಳಿಗೆ ವಾರಸುದಾರನಾಗುತ್ತಾನೆ.

ಆತನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ ಇದೇ ಬೋಧನೆಯನ್ನೇ ಎಲ್ಲ ಪ್ರವಾದಿಗಳೂ ತಂದಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಮತ್ತು ಮುಂಚಿನ ಪ್ರವಾದಿಗಳು ಹೇಳಿದ ಅತ್ಯಂತ ಶ್ರೇಷ್ಠ ವಾಕ್ಯ **'ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕ ಲಹೂ'** ಎಂದಾಗಿದೆ. ಒಟ್ಟಿನಲ್ಲಿ ಈ ಅಧ್ಯಾಪನೆ ಎಲ್ಲ ಪ್ರವಾದಿಗಳದ್ದಾಗಿದೆ. ಆದರೆ ದೌರ್ಭಾಗ್ಯಕರವಾದ ಸಂಗತಿಯೇನೆಂದರೆ, ಅದೇ ಪ್ರವಾದಿಗಳ ಸಮುದಾಯಗಳು ಈ ಅಧ್ಯಾಪನೆಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಮರೆತುಬಿಟ್ಟು ಶಿರ್ಕಿನ ಮಾರ್ಗವನ್ನು ಅವಲಂಬಿಸಿರುವರು. ನಾವು ಭಾಗ್ಯವಂತರು, ಏಕೆಂದರೆ ಅಲ್ಲಾಹನು ನಮ್ಮನ್ನು ಹಝ್ರತ್ ಪೈಗಂಬರ್(ಸ)ರ ಸಮುದಾಯದಲ್ಲಿ ಸೇರಿಸಿಕೊಂಡು ಶಿರ್ಕನ್ನು ಪೂರ್ಣವಾಗಿ ಕೊನೆಗೊಳಿಸಿದ ಅಧ್ಯಾಪನೆಯನ್ನು ನೀಡಿರುವನು ಮತ್ತು ಹಝ್ರತ್ ಪೈಗಂಬರ್(ಸ) ನಮಗೆ ಏಕದೇವ ವಿಶ್ವಾಸದ ನೈಜವಾದ ಪಾಠವನ್ನು ನೀಡಿಕೊಂಡು ನಮ್ಮ ಇಹಲೋಕ ಮತ್ತು ಪರಲೋಕವನ್ನು ಸುಂದರಗೊಳಿಸಿರುವರು. ಆದ್ದರಿಂದ ಈಗ ಹಝ್ರತ್ ಪೈಗಂಬರ್(ಸ)ರ ಯಥಾರ್ಥ ಅಧ್ಯಾಪನೆಯ ಪ್ರಕಾರ ನಡೆಯುವವರು, ನಿಷ್ಠಾವಂತರಾಗಿ ಅಲ್ಲಾಹನ ಏಕತೆಯನ್ನು ಒಪ್ಪುವವರು ಮಾತ್ರವೇ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವರು ಮತ್ತು ಹಝ್ರತ್ ಪೈಗಂಬರ್(ಸ)ರ ಶಿಫಾರಸ್ಸಿನಿಂದ ಪಾಲು ಪಡೆಯುವರು.

ಹಝ್ರತ್ ಪೈಗಂಬರ್(ಸ)ರ ಶಿಫಾರಸ್ಸಿಗಾಗಿ ನಿಷ್ಠಾವಂತ ಹೃದಯದೊಂದಿಗೆ **ಲಾ ಇಲಾಹ ಇಲ್ಲಲ್ಲಾಹ್** ಎಂಬ ವಾಕ್ಯವನ್ನು ಒಪ್ಪಬೇಕು. ಅದರಲ್ಲಿ ಲೌಕಿಕತೆ ಮಿಶ್ರಿತಗೊಳ್ಳಬಾರದು. ಶಿಫಾಅತಿನ ಅಧಿಕಾರ ನೀಡಲ್ಪಟ್ಟ ಕೊನೆಯ ಮತ್ತು ಪರಿಪೂರ್ಣ ಪ್ರವಾದಿ ಹಝ್ರತ್ ಪೈಗಂಬರ್(ಸ) ಆಗಿರುವರು. ಹಝ್ರತ್ ಪೈಗಂಬರ್(ಸ)ರ ಶಿಫಾರಸು ಪಡೆಯಲು ಅಲ್ಲಾಹನ ಆದೇಶ ಪ್ರಕಾರ ಹಝ್ರತ್ ಪೈಗಂಬರ್(ಸ)ರನ್ನು ನಂಬುವುದು ಅಗತ್ಯ. ನಾವು ಅಹ್ಮದಿಯರು ಭಾಗ್ಯವಂತರು, ಏಕೆಂದರೆ ಈ ಕಾಲದ ಇಮಾಂ ಮತ್ತು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಿರುವನು. ಅವರು ಸ್ಪಷ್ಟವಾಗಿ ಇಸ್ಲಾಮಿನ ಆಜ್ಞೆಗಳ ಆಳ ಮತ್ತು ಯುಕ್ತಿಯನ್ನು ನಮಗೆ ತಿಳಿಸಿರುವರು. **ಲಾ ಇಲಾಹ ಇಲ್ಲಲ್ಲಾಹ್** ಎಂಬ ವಚನದ ಆಳವಾದ ಅರ್ಥವನ್ನು ಹೇಳುವುದರೊಂದಿಗೆ ಅವರು ನಮಗೆ ಹಝ್ರತ್ ಪೈಗಂಬರ್(ಸ)ರ ಪದವಿಯ ಬಗ್ಗೆಯೂ ಹೇಳಿಕೊಟ್ಟಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **ಅಲ್‌ಯೌಮ ಅಕ್‌ಮಲ್‌ತು** ಎಂದು ಅಲ್ಲಾಹನು ಹೇಳಿದ ವಚನದ ತಾತ್ಪರ್ಯವನ್ನು ಅವನು ಸ್ವತಃ ಬೇರೊಂದೆಡೆ ವಿವರಿಸಿರುವನು. ಅದರಲ್ಲಿ ಮೂರು ಲಕ್ಷಣಗಳು ಇರಲೇ ಬೇಕು. ಮೊದನೆಯದಾಗಿ, **ಅಸ್‌ಲುಹಾ ಸಾಬಿತುನ್,** ಅದರ ಬೇರುಗಳು ಗಟ್ಟಿಯಾಗಿ ನೆಲೆಸಿದೆ. ಎರಡನೇ ಲಕ್ಷಣ, **ಫರ್‌ಉಹಾ ಫಿಸ್ಸಮಾಇ,** ಅದರ ರೆಂಬೆಗಳು ಆಕಾಶದ ಎತ್ತರಕ್ಕೆ ತಲುಪಿವೆ. ಮೂರನೇ ಲಕ್ಷಣ, **ತುಅ್‌ತೀ ಉಕುಲಹಾ ಕುಲ್ಲ ಹೀನಿನ್,** ಸದಾ ತಾಜಾ ಹಣ್ಣುಗಳನ್ನು ನೀಡುತ್ತದೆ. ಈ ಮಟ್ಟವನ್ನು ಪೂರ್ಣವಾಗಿ ತಲುಪುವ ಧರ್ಮ ಇಸ್ಲಾಂ ಮಾತ್ರವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮೊದಲ ಲಕ್ಷಣ ವಿಶ್ವಾಸದ ಬೇರಾಗಿದೆ. ಅದು **ಲಾ ಇಲಾಹ ಇಲ್ಲಲ್ಲಾಹ್** ಎಂಬುದಾಗಿದೆ. ಅದನ್ನು ಪವಿತ್ರ ಖುರ್‌ಆನ್ ಎಷ್ಟೊಂದು ವರ್ಣಿಸಿದೆ ಎಂದರೆ, ಅದರ ಎಲ್ಲ ಪುರಾವೆಗಳು ಕೆಲವು ಸಂಪುಟಗಳಲ್ಲಿ ಕೊನೆಗೊಳ್ಳದು. ಈ ಪ್ರಪಂಚಕ್ಕೆ ಒಂದು ಸೃಷ್ಟಿಕರ್ತ ಮತ್ತು ನಿರ್ಮಾಪಕ ಇರುವನು ಎಂಬುವುದನ್ನು ಅಲ್ಲಾಹನ ಎಲ್ಲ ಸೃಷ್ಟಿಗಳು ಮತ್ತು ಲೋಕ ವ್ಯವಸ್ಥೆಯ ಸರಪಳಿಯು ಸ್ಪಷ್ಟವಾಗಿ ತಿಳಿಸುತ್ತಿವೆ. ಅವನು ಪರಮ ದಯಾವಂತ, ಕಾರುಣ್ಯನಿಧಿ, ಸರ್ವಶಕ್ತಿಶಾಲಿ, ಏಕನೂ ಸಹಭಾಗಿ ಇಲ್ಲದವನೂ, ಅನಾದಿ, ಅನಂತ ಮತ್ತು ತಾನು ಇಚ್ಛಿಸಿದ್ದನ್ನು ಮಾಡುವವನು ಎಂಬೀ ಗುಣಗಳನ್ನು ಹೊಂದಿರಬೇಕು ಎಂಬುದು ಸಹ ಅಗತ್ಯ. ನಮ್ಮ ದೇವನು ಅನಾದಿ ಕಾಲದಿಂದ ಇದ್ದಾನೆ ಮತ್ತು ಅನಂತ ಕಾಲದ ವರೆಗೆ ಇರುವನು. ಅವನು ಪ್ರತಿಯೊಂದು ಸೃಷ್ಟಿಯ ಸೃಷ್ಟಿಕರ್ತನಾಗಿದ್ದಾನೆ ಮತ್ತು ಸಕಲ ಆವಶ್ಯಕತೆಗಳಿಗಾಗಿ ಅವನ ಮುಂದೆಯೇ ಬಾಗಬೇಕಾಗಿದೆ. ಒಟ್ಟಿನಲ್ಲಿ ವಿಶ್ವಾಸದ ಸ್ಥಿತಿ ಈ ರೀತಿಯದ್ದು ಆಗುವಾಗ ಅದು

ಪರಿಪೂರ್ಣ ವಿಶ್ವಾಸ ಆಗುವುದು. ಅದರಲ್ಲಿ ಶಿರ್ಕಿನ ಮಿಶ್ರಣ ಇರಲು ಸಾಧ್ಯವಿಲ್ಲ. ಇದೇ ಈಮಾನಿನ ಕುರಿತು ಹಝ್ರತ್ ಪೈಗಂಬರ್[ಸ] ಹೇಳಿರುವುದು – **ಲಾ ಇಲಾಹ ಇಲ್ಲಲ್ಲಾಹು** ಎಂದು ಹೇಳುವವನ ಮೇಲೆ ನರಕದ ಬೆಂಕಿಯನ್ನು ನಿಷಿದ್ಧಗೊಳಿಸಲಾಗಿದೆ ಎಂದು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನು ಪರಿಪೂರ್ಣ ಅಸ್ತಿತ್ವವಾಗಿದ್ದಾನೆ. ಅವನಿಂದಲೇ ಸಹಾಯ ಪಡೆಯಬೇಕಾಗಿದೆ. ಬೇರೆ ಯಾರಿಗೂ ಅದರ ಹಕ್ಕಿಲ್ಲ. ಇದಕ್ಕೆ ಪವಿತ್ರ ಖುರ್‌ಆನ್ ಒತ್ತು ನೀಡಿದೆ. ಇದು ಸಂಬಂಧವಾಗಿ ಅಲ್ಲಾಹನು ಹೇಳುತ್ತಾನೆ: **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್**. ಎಂದರೆ, ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ಆರಾಧಿಸಲಿಕ್ಕಾಗಿ ನಿನ್ನಿಂದಲೇ ನೆರವು ಪಡೆಯಲು ಬಯಸುತ್ತೇವೆ. ಅಲ್ಲಾಹನಿಂದಲೇ ಸಹಾಯವನ್ನು ಯಾಚಿಸಬೇಕು ಎಂದು ಇದರಿಂದ ತಿಳಿದುಬರುತ್ತದೆ. ಎರಡನೇ ಪದವಿಯಲ್ಲಿ, ಈ ಹಕ್ಕನ್ನು ದೈವಿಕ ಜನರಿಗೆ ನೀಡಲಾಗಿದೆ. ಅವರ ಪ್ರಾರ್ಥನೆಗಳ ಮೂಲಕವೂ ಸಹಾಯ ಪಡೆಯಲಾಗುತ್ತದೆ. ಮನುಷ್ಯನ ಪ್ರಿಯತಮ ಮತ್ತು ಗುರಿ ಅಲ್ಲಾಹನೇ ಆಗಿರಬೇಕು ಎಂದು **'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್'**ದ ಮೊದಲ ಭಾಗದಿಂದ ತಿಳಿದು ಬರುತ್ತದೆ. ಎರಡನೇ ಭಾಗದಲ್ಲಿ ಹಝ್ರತ್ ಪೈಗಂಬರ್[ಸ]ರ ಪ್ರವಾದಿತ್ವದ ನೈಜತೆಯನ್ನು ಸ್ಪಷ್ಟಪಡಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವುದರ ಪ್ರಕಾರ ನಡೆಯುವ ತನಕ ಅದರ ಹಕ್ಕು ಈಡೇರಲ್ಪಡುವುದಿಲ್ಲ. ಇದೇ ಸತ್ಯವಿಶ್ವಾಸದ ನಿಬಂಧನೆಯಾಗಿದೆ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳ ಪ್ರಕಾರ ನಡೆಯುವುದು ಸಹ ಅಗತ್ಯ. ಆಗಲೇ ಮನುಷ್ಯನು **ಲಾ ಇಲಾಹ ಇಲ್ಲಲ್ಲಾಹ್** ಪ್ರಕಾರ ನಡೆಯುವವನಾಗುವನು. ಆಗಲೇ ಮನುಷ್ಯನು ಅಲ್ಲಾಹನ ಮುಂದೆ ಸತ್ಯವಂತನಾಗುತ್ತಾನೆ.

ಈ ವಾಕ್ಯದ ಎರಡನೇ ಭಾಗ ಒಂದು ಮಾದರಿಯನ್ನು ತೋರಿಸಲಿಕ್ಕೆ ಆಗಿದೆ. ಪ್ರವಾದಿಗಳು ಮಾದರಿಗಳನ್ನು ತೋರಿಸಲು ಆಗಮಿಸುತ್ತಾರೆ. ಹಝ್ರತ್ ಪೈಗಂಬರ್[ಸ] ಎಲ್ಲ ಪ್ರವಾದಿಗಳನ್ನು ಒಳಗೊಂಡ ಪ್ರವಾದಿಯಾಗಿದ್ದರು. ಅವರಲ್ಲಿ ಎಲ್ಲ ಪ್ರವಾದಿಗಳ ಮಾದರಿಗಳು ಒಟ್ಟು ಸೇರಿದ್ದುವು. ಅಲ್ಲಾಹನ ಆಜ್ಞೆಗಳ ಪ್ರಕಾರ ಸರಿಯಾಗಿ ನಡೆದದ್ದು ಮತ್ತು ಸರಿಯಾಗಿ ಅವುಗಳನ್ನು ವ್ಯಾಖ್ಯಾನಿಸಿದ್ದು ಹಝ್ರತ್ ಪೈಗಂಬರ್[ಸ] ಅವರೇ ಆಗಿರುವರು. ಅವುಗಳ ಪ್ರಕಾರ ಅವರು ನಡೆದು ತೋರಿಸಿದರು.

ವಿಶ್ವಾಸಿಗಳನ್ನು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಸಾಂಪ್ರದಾಯಿಕ ಬೈಅತಿನಿಂದ ಪ್ರಯೋಜನವಿಲ್ಲ. ಅಂತಹ ಬೈಅತ್ತಿನಿಂದ ಪ್ರಯೋಜನ ಪಡೆಯುವುದು ಕಷ್ಟಕರ. ತನ್ನ ಅಸ್ತಿತ್ವವನ್ನು ಉಪೇಕ್ಷಿಸಿ ನಿಷ್ಠಾವಂತರಾಗಿಕೊಂಡು ಯಾರನ್ನು ಬೈಅತ್ ಮಾಡಿರುವಿರೋ ಅವರ ಜೊತೆಗೆ ಆಗುವುದರಿಂದ ಮಾತ್ರ ಬೈಅತ್ ಪ್ರಯೋಜನ ನೀಡುವುದು. ಸಾಧ್ಯವಾದಷ್ಟು ರೀತಿಗಳಲ್ಲಿ ಮತ್ತು ಆರಾಧನೆಗಳಲ್ಲಿ ಮಾರ್ಗದರ್ಶಿಗೆ ಸಮಾನವಾದ ವಿಧಾನವನ್ನು ಹೊಂದಿರಬೇಕು ಮತ್ತು ಹಗಲು ರಾತ್ರಿ ತನ್ನ ಅವಲೋಕನ ನಡೆಸಬೇಕು. ಎಲ್ಲಿಯ ವರೆಗೆ ನಾವು **ಲಾ ಇಲಾಹ ಇಲ್ಲಲ್ಲಾಹ್** ಪ್ರಕಾರ ನಡೆದಿದ್ದೇವೆ. ಎಂದು ನೋಡಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಮುಸ್ಲಿಮರು ಕೇವಲ ಕಲಿಮ ಉಚ್ಚರಿಸಿಕೊಂಡು ಆರಾಮವಾಗಿ ಇರಬೇಕು ಎಂಬುದು ಖಂಡಿತ ನನ್ನ ಮಾತಿನ ಅರ್ಥವಲ್ಲ. ಬದಲಾಗಿ ತಮ್ಮ ವ್ಯಾಪಾರಗಳಲ್ಲಿ ಮತ್ತು ಉದ್ಯೋಗಗಳಲ್ಲಿ ನಿರತರಾಗಿರಬೇಕು. ಆದರೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದರ ಕಡೆಗೆ ಗಮನವಿರಬೇಕು. ವ್ಯಾಪಾರ ಮಾಡುವಾಗಲೂ ದೇವಭಯ ಇರಬೇಕು. ಎಲ್ಲ ವಿಷಯಗಳಲ್ಲೂ ಧರ್ಮಕ್ಕೆ ಆದ್ಯತೆ ನೀಡಬೇಕು. ಲೌಕಿಕತೆಯೇ ಪರಮ ಉದ್ದೇಶವಾಗಿರಬಾರದು. ನಿಜವಾದ ಗುರಿ ಧರ್ಮವಾಗಿದ್ದರೆ ಆಗ ಲೌಕಿಕವಾದ ಕೆಲಸಗಳು ಸಹ ಧಾರ್ಮಿಕವಾದ ಕೆಲಸವಾಗುವುವು. ಸಹಾಬಿಯರು ಕೂಡ ಅತಿ ಕಠಿಣವಾದ ಸಮಯದಲ್ಲೂ ಅಲ್ಲಾಹನನ್ನು ಬಿಡಲಿಲ್ಲ. ಅವರು ಅಲ್ಲಾಹನಿಂದ ಮುಖ ತಿರುಗಿಸಲೂ ಇಲ್ಲ. ನಮಾಝ್‌ಗಳನ್ನು ಉಪೇಕ್ಷಿಸಿಯೂ ಇರಲಿಲ್ಲ. ಬದಲಾಗಿ ದುಆಗಳನ್ನು ಮಾಡುತ್ತಿದ್ದರು.

ಕಲಿಮದ ನೈಜತೆ, ಅದರ ಅರ್ಥ ಮತ್ತು ಅದರ ಪ್ರಕಾರ ನಡೆಯುವುದರ ಕುರಿತು ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಸತ್ಯವಿಶ್ವಾಸವನ್ನು ಕೈಗೊಳ್ಳುವುದು ಎಂದರೆ, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಿವರಿಸಿರುವ ಆಜ್ಞೆಗಳನ್ನು ಕೃತ್ಯರೂಪದಲ್ಲಿ ಪ್ರಕಟಿಸುವುದಾಗಿದೆ ಮತ್ತು ಕೃತ್ಯರೂಪದಲ್ಲಿ ಧರ್ಮಕ್ಕೆ ಲೌಕಿಕತೆಗಿಂತ ಆದ್ಯತೆ ನೀಡುದಾಗಿದೆ. ಒಟ್ಟಿನಲ್ಲಿ, ಸತ್ಯ ಹೃದಯದೊಂದಿಗೆ **'ಲಾ ಇಲಾಹ ಇಲ್ಲಲ್ಲಾಹ್'**ವನ್ನು ನಂಬಿದವನು ಸ್ವರ್ಗದಲ್ಲಿ ಪ್ರವೇಶಿಸಿದನು. ಅನಂತರ ಅಲ್ಲಾಹನಲ್ಲದೇ ಆತನಿಗೆ ಯಾರೂ ಪ್ರಿಯವಾಗಿರುವುದಿಲ್ಲ ಮತ್ತು ಆತನು ಅಲ್ಲಾಹನ ಸಂಪ್ರೀತಿಯನ್ನು ಬಯಸುತ್ತಾನೆ. ಕಷ್ಟತೆಗಳಿಂದ ಆತನು ಕಳವಳಗೊಳ್ಳುವುದಿಲ್ಲ. ಏಕೆಂದರೆ ಅಲ್ಲಾಹನು ತನ್ನ ಮಿತ್ರನ ಸಹಾಯಕ್ಕಾಗಿ ತಕ್ಷಣವೇ ತಲುಪುವನು ಎಂದು ಆತನಿಗೆ ದೃಢವಿಶ್ವಾಸವಿರುತ್ತದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಎಲ್ಲಿಯ ವರೆಗೆ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಅಲ್ಲಾಹನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವುದಿಲ್ಲವೋ ಅಲ್ಲಿಯ ವರೆಗೆ **'ಲಾ ಇಲಾಹ ಇಲ್ಲಲ್ಲಾಹ್'**ದ ಯಥಾರ್ಥವಾದ ಉದ್ದೇಶವನ್ನು ಗಳಿಸಲು ಸಾಧ್ಯವಲ್ಲ. ಒಬ್ಬನು ಮತ್ತೊಬ್ಬನ ಹಕ್ಕನ್ನು ಕಸಿದುಕೊಳ್ಳುತ್ತಾನೆ. ಇತರ ಮಾರ್ಗಗಳ ಮೇಲೆ ಎಷ್ಟೊಂದು ಭರವಸೆ ಹೊಂದಿರುತ್ತಾನೆ ಎಂದರೆ, ಅಲ್ಲಾಹನನ್ನು ಕೇವಲ ವ್ಯರ್ಥವಾದ ಅಂಗವೆಂದು ಭಾವಿಸುತ್ತಾನೆ. ಏಕದೇವ ವಿಶ್ವಾಸದ ನಿಜವಾದ ಅರ್ಥವನ್ನು ತಿಳಿದಿರುವವರು ಬಹಳ ವಿರಳ. ಮನುಷ್ಯನು ಕಲಿಮದ ನೈಜತೆಯನ್ನು ಮನವರಿಕೆ ಮಾಡಿದರೆ ಮತ್ತು ಕೃತ್ಯರೂಪವಾಗಿ ಅದರ ಪ್ರಕಾರ ನಡೆದರೆ ಬಹಳ ಹಿರಿದಾದ ಅಭಿವೃದ್ಧಿಯನ್ನು ಗಳಿಸಲು ಸಾಧ್ಯ. ಅಲ್ಲಾಹನ ಅತ್ಯಂತ ಆಶ್ಚರ್ಯಕರವಾದ ಶಕ್ತಿ ಪ್ರಕಟಣೆಗಳನ್ನು ನೋಡಲು ಆತನಿಗೆ ಸಾಧ್ಯವಾಗುವುದು.

ಸಕಲ ಪಾಪಗಳಿಂದ ದೂರವಿದ್ದರೆ ಮಾತ್ರ ನಿಜವಾದ ಏಕದೇವ ವಿಶ್ವಾಸಿಯಾಗಲು ಸಾಧ್ಯ. ಪಾಪಗಳಿಂದ ದೂರವಿರಲು ಮತ್ತು **ಲಾ ಇಲಾಹ ಇಲ್ಲಲ್ಲಾಹ್**ದಲ್ಲಿ ಸರಿಯಾದ ರೀತಿಯಲ್ಲಿ ವಿಶ್ವಾಸ ಹೊಂದಲು ನಮ್ಮಲ್ಲಿ ಪ್ರತಿಯೊಬ್ಬರು ಈ ರಮಝಾನಿನಲ್ಲಿ ಪ್ರಯತ್ನಿಸಬೇಕು. ರಮಝಾನಿನ ಈ ಉಳಿದ ದಿನಗಳಲ್ಲಿ ಪ್ರಯತ್ನ ಮತ್ತು ದುಆದೊಂದಿಗೆ ತಮ್ಮೊಳಗಿನ ಎಲ್ಲ ಕೆಡುಕುಗಳನ್ನು ಹೊರಗೆ ಹಾಕಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ನಾವು ಲೈಲತುಲ್ ಖದರಿನ ಬಗ್ಗೆ ಹೇಳುತ್ತಿರುತ್ತೇವೆ. ನಾವು ನಮ್ಮ ಪ್ರತಿಯೊಂದು ಮಾತು ಮತ್ತು ಕೃತ್ಯವನ್ನು ಅಲ್ಲಾಹನ ಆದೇಶಗಳ ಪ್ರಕಾರ ಮಾಡಲು ತಯಾರಾಗುವಾಗ, ಅದರ ಪ್ರಕಾರ ನಡೆಯಲು ತಯಾರಾಗುವಾಗ ಮತ್ತು ಅವುಗಳನ್ನು ಸ್ಥಾಯಿಯಾಗಿ ಮತ್ತು ನಿರಂತರವಾಗಿ ನಮ್ಮ ಜೀವಿತಗಳ ಭಾಗವನ್ನಾಗಿ ಮಾಡುವಾಗ ಮಾತ್ರ ನಮಗೆ **ಲೈಲತುಲ್ ಖದರ್** ಲಭಿಸುವುದು. **ಲೈಲತುಲ್ ಖದರ್** ಲಭಿಸಿದೆ ಎಂಬುದಕ್ಕೆ ಇರುವ ನಿಜವಾದ ಲಕ್ಷಣ ಇದೇ ಆಗಿದೆ. ನಮ್ಮ ಹೃದಯದಲ್ಲಿ ಯಾವ ಬದಲಾವಣೆಯನ್ನು ಉಂಟು ಮಾಡಿದ್ದೇವೆ ಎಂಬುದಾಗಿದೆ ಅದರ ಮುಖ್ಯ ಲಕ್ಷಣ.

ನಾವು ನಿಷ್ಠಾವಂತರಾಗಿ ಮೂರು ದಿನಗಳು ದುಆಗಳನ್ನು ಮಾಡಿದರೆ ಅಲ್ಲಾಹನು ವಿಶಿಷ್ಟವಾದ ಅನುಗ್ರಹವನ್ನು ಪ್ರಕಟಗೊಳಿಸುವನು ಎಂಬ ನನ್ನ ಮಾತನ್ನು ಮುಂದಿರಿಸಿಕೊಂಡು ಕೆಲವು ಜಮಾಅತುಗಳಲ್ಲಿ ದುಆಗಳ ವಿಶಿಷ್ಟ ವ್ಯವಸ್ಥೆ ಮಾಡಲಾಗಿದೆ. ಮೂರು ದಿನಗಳು ದುಆಗಳನ್ನು ಮಾಡಿದ ನಂತರ ತಮ್ಮ ಹಳೆಯ ಜೀವಿತ ರೀತಿಗೆ ಬರಲಿಕ್ಕೆ ಮತ್ತು **ಲಾ ಇಲಾಹ ಇಲ್ಲಲ್ಲಾಹ್**ದ ನಿಜವಾದ ಉದ್ದೇಶವನ್ನು ಮರೆತು ಬಿಡಲಿಕ್ಕೆ ನಾವು ಈ ಮೂರು ದಿನಗಳನ್ನು ವಿಶಿಷ್ಟಗೊಳಿಸಿರುವುದಾದರೆ, ನೆನಪಿಡಿರಿ, ಅಲ್ಲಾಹನು ನಮ್ಮ ಹೃದಯಗಳ ಸ್ಥಿತಿಯನ್ನು ಬಲ್ಲನು, ನಮ್ಮ ಉದ್ದೇಶಗಳನ್ನು ಬಲ್ಲನು, ಅವನಿಂದ ಯಾವುದೇ ಸಂಗತಿ ಗೋಪ್ಯವಾಗಿರುವುದಿಲ್ಲ. ಅಂತಹ ಸ್ಥಿತಿಯಲ್ಲಿ ಅದರಿಂದ ಯಾವುದೇ ಪ್ರಯೋಜನ ಲಭಿಸಲಾರದು. ಆದರೆ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಈ ದಿನಗಳನ್ನು ಸಾಗಿಸಲು ಬಯಸುವುದಾದರೆ, ಈ ದಿನಗಳು ನಮ್ಮ ಜೀವಿತಗಳ ಸ್ಥಾಯಿಯಾದ ಭಾಗವಾಗುವುದು ಎಂಬ ಪ್ರತಿಜ್ಞೆಯೊಂದಿಗೆ ಸಾಗಿಸಬೇಕು. ಹಾಗೆ ಆದರೆ, ಶತ್ರುಗಳು ನಮಗೆ ನೀಡುತ್ತಿರುವ ತೊಂದರೆಗಳನ್ನು ದೂರ ಮಾಡಲು ಅಲ್ಲಾಹನು ತನ್ನ ವಿಶಿಷ್ಟ ನೆರವು ಮತ್ತು ಸಹಾಯವನ್ನು ಪ್ರಕಟಗೊಳಿಸುವನು. ಇನ್‌ಶಾ ಅಲ್ಲಾಹ್.

ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಮತ್ತು ಹಝ್ರತ್ ಮಸೀಹ್ ಮೌಊದ್[ಅ]ರ ಜಮಾಅತಿಗೆ ವಿಜಯ ನೀಡುವನು ಎಂದು ಅಲ್ಲಾಹನು ವಾಗ್ದಾನ ಮಾಡಿರುವನು. ಅದು ಬೇಗನೇ ಅಥವಾ ಸ್ವಲ್ಪ ಕಾಲದ ನಂತರ ಆಗಿರಬಹುದು. ನಾವು **ಲಾ ಇಲಾಹ ಇಲ್ಲಲ್ಲಾಹ್**ದ ನೈಜತೆಯನ್ನು ಅರಿತುಕೊಂಡು ನಮ್ಮ ಆರಾಧ್ಯ, ನಮ್ಮ ಪರಮ ಉದ್ದೇಶ ಮತ್ತು ಪ್ರಿಯತಮವಾಗಿ ಅಲ್ಲಾಹನ ಅಸ್ತಿತ್ವವನ್ನು ಮಾಡಿದರೆ ಮತ್ತು ಲೋಕಕ್ಕಿಂತ ನಮಗೆ ಅಲ್ಲಾಹನ ಪ್ರೀತಿ ಮತ್ತು ಅವನನ್ನು ಗಳಿಸುವುದು ನಮ್ಮ ಗುರಿಯಾದರೆ ಹಿರಿದಾದ ಬದಲಾವಣೆ ಬೇಗನೇ ಉಂಟಾಗುವುದು. ಆದುದರಿಂದ ನಮ್ಮ ಸ್ಥಿತಿಗಳನ್ನು ಸ್ಥಾಯಿಯಾಗಿ ಬದಲಾಯಿಸಲು ನಾವು ಪ್ರತಿಜ್ಞೆ ಮಾಡಬೇಕಾಗಿದೆ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಈ ದಿನಗಳಲ್ಲಿ ಲೋಕದ ಶಾಂತಿ ಮತ್ತು ನೆಲೆ ನಿಲ್ಲುವಿಕೆಗಾಗಿಯೂ ದುಆ ಮಾಡುತ್ತಿರಿ. ಅಲ್ಲಾಹನು ಮಾನವಕುಲದ ಮೇಲೆ ಕರುಣೆ ಮತ್ತು ಕೃಪೆ ತೋರಿಸುವವನಾಗಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***[atba]

*At, **'Masjid Mubarak',** Islamabad, Tilford, UK. On 14-04-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon